ಕೇಶವರೆಡ್ಡಿ ಹಂದ್ರಾಳ

# ಹೆಣದ ಬಟ್ಟೆ


ಚಿತ್ರಗಳು: ಸೃಜನ್

ಅರವತ್ತು ತುಂಬಿದ ಮೇಗಳ ಹಟ್ಟಿಯ ಚಿಕ್ಕದುರಪ್ಪ ವಿಪರೀತ ಚಳಿಯಿಂದಾಗಿ ತನ್ನ ಗುಡಿಸಲ ಮೂಲೆಯಲ್ಲಿ ಹರಿದ ರಗ್ಗೊದ್ದು ಗೂಡರಿಸಿಕೊಂಡು ಮಲಗಿದ್ದ. ಹಾಗೆ ನೋಡಿದರೆ ಇಡೀ ಹಟ್ಟಿಯ ಜನತೆ ಸರಿಯಾದ ಹೊದಿಕೆ ಇಲ್ಲದೆ ಚಳಿಯೊಂದಿಗೆ ಗುದ್ದಾಡುತ್ತಾ ಒದ್ದಾಡುತ್ತಿತ್ತು. ಅಂತಹುದರಲ್ಲಿ ಯಃಕಶ್ಚಿತ್ ವ್ಯಕ್ತಿಯಾದ ಚಿಕ್ಕದುರಪ್ಪನನ್ನು ಕೇರು ಮಾಡುವವರಾದರೂ ಯಾರು?

ಊರ ಗೌಡರ ತಾಯಿ ಗೌರಮ್ಮ ರಾತ್ರಿ ಒಂದ್ಹೊತ್ತಿನಲ್ಲಿ ಸತ್ತು ಹೋದರೆಂದು ಹೊರಗೆ ಯಾರೋ ಹೇಳಿದ ಮಾತು ಕಿವಿಗೆ ಬಿದ್ದು ಚಿಕ್ಕದುರಪ್ಪ ಏನೋ ಹೊಳೆದಂತಾಗಿ ಲಗುಬಗೆಯಿಂದ ಹರಿದ ರಗ್ಗೊದ್ದು ಗೌಡರ ಮನೆ ಕಡೆ ನಡೆದ.

ಗೌಡರ ಹಟ್ಟಿಯ ಮುಂದೆ ಬೆಂಕಿ ಹಾಕಿದ್ದರು. ಬೆಂಕಿಯ ಹತ್ತಿರ ಕುಳಿತ ಚಿಕ್ಕದುರಪ್ಪ ಕೊಳ್ಳಿಗಳನ್ನು ಪೋಣಿಸುತ್ತಾ ಹೊಗೆ ಎಬ್ಬಿಸುತ್ತಿದ್ದ. ಹಜಾರದ ಜಗಲಿಯ ಮೇಲೆ ಹತ್ತಿಯ ಹಾಸಿಗೆಯ ಮೇಲೆ ಉಲ್ಲನ್ ರಗ್ಗೊದ್ದು ಮಲಗಿದ್ದ ಗೌರಮ್ಮ ಇವೊತ್ತೋ ನಾಳೆಯೋ ಎನ್ನುವಂತೆ ಮೂರು ತಿಂಗಳಿಂದಲೂ ತುಕತುಕಾ ಜೀವ ಹಿಡಿದುಕೊಂಡೇ ಕಾಲ ಹಾಕಿ ಇವೊತ್ತು ಉಸಿರು ಬಿಟ್ಟಿದ್ದಳು. ಅಲ್ಲಿಗೆ ಹಿಟ್ಟಿಗೆ ಬಂದಾಗಲೆಲ್ಲ ಚಿಕ್ಕದುರಪ್ಪ ಆಸೆಯಿಂದ ಗೌರಮ್ಮನು ಮಲಗಿದ್ದ ಹಾಸಿಗೆ ಮತ್ತು ರಗ್ಗನ್ನು ತದೇಕ ದೃಷ್ಟಿಯಿಂದ ನೋಡುತ್ತಿದ್ದ.

ನೆಂಟರೆಲ್ಲರೂ ಸೇರಿದ ಮೇಲೆ ಗೌರಮ್ಮನ ಹೆಣವನ್ನು ಹಾಸಿಗೆಯ ಮೇಲಿಂದ ಎತ್ತಿ ಸ್ನಾನ ಮಾಡಿಸಿ ಚಟ್ಟದ ಮೇಲೆ ಮಲಗಿಸಿದರು. ಅಗಸರ ಮುದ್ದಯ್ಯ ಗೌಡರ ಮಾತಿನಂತೆ ಜಗಲಿಯ ಮೇಲಿದ್ದ ಹಾಸಿಗೆ ಮತ್ತು ರಗ್ಗನ್ನು ಬೇಲಿಯ ಆಚೆ ಎಸೆದು ಬಂದಿದ್ದ. ಚಿಕ್ಕದುರಪ್ಪ ಎರಡನ್ನೂ ಹೊತ್ತು ತನ್ನ ಗುಡಿಸಲ ಕಡೆ ನಡೆದಿದ್ದ. ಸ್ಮಶಾನದಲ್ಲಿ ಗೌರಮ್ಮನ ಹೆಣವನ್ನು ಹೂತು, ಹೊಲೆಯರ ಉಗ್ರಪ್ಪ ಜೋರಾಗಿ ಉಸಿರುಗಟ್ಟಿ ಊದುತ್ತಿದ್ದ ಕೊಂಬಿನ ಸದ್ದು ಅಲೆಅಲೆಯಾಗಿ ಎಗರಿಕೊಂಡು ಬಂದು ಹತ್ತಿಯ ಹಾಸಿಗೆಯ ಮೇಲೆ ಉಲ್ಲನ್ ರಗ್ಗೊದ್ದು ಸುಖವಾಗಿ ಮಲಗಿದ್ದ ಚಿಕ್ಕದುರಪ್ಪನ ಕಿವಿಯಲ್ಲಿ ಸುಮಧುರ ಸಂಗೀತದಂತೆ ಹರಡಿಕೊಂಡಿತ್ತು.

❖